9
ದೇವರೆ! ಕರುಣಿಸು
ಸೋಲನ್ನು!
ನಾನೇ ಗಳಿಸುವೆ
ಗೆಲುವನ್ನು!

13
ನೋಡೇ ಚದುರೆ! ಜೋಡಿ ಕುದುರೆ
ಅಲ್ಲೇ ಠಕ್ಕರಠಕ್!
ಕುದುರೆ ಮೇಲೆ ಕಾವಲುಗಾರ
ಕೂತಲ್ಲೇ ಬೈಠಕ್!



14
ನಾವು ಯಾರಿಗೆ ಅಂತ ತಿಳಿದು
ಮುದ್ದು ಮಾಡ್ತೇವೆ
ಯಾರಿಗೆ ಅಂತ ತಿಳಿದು
ಉಡುಗೊರೆ ನೀಡ್ತೇವೆ
ಯಾರಿಗೆ ಅಂತ ತಿಳಿದು
ಗದರಿ ಗರ್ಜಿಸ್ತೇವೆ.
ಯಾರಿಗೆ ಅಂತ ತಿಳಿಯದೆ
ಮಾಡೋ ಒಂದೇ ಕೆಲಸ
ಪದ್ಯ ಬರೆಯೋದು!

10
ವಯಸ್ಸು ಆಗ್ತಾ ಆಗ್ತಾ
ಯುವಕ ಆಗ್ತಾನೆ ಮುದುಕ
ಬೆನ್ನು ಬಗ್ಗಿಸಿ ಹುಡುಕ್ತಾನೆ ಪಾಪ
ಯಾವ ಮಾಯದಲ್ಲೋ ಕಳಕೊಂಡ ತನ್ನ ರೂಪ!

11
ಗೆಲ್ಲೋದಕ್ಕೆ ಮಕ್ಕಳಿಗೆ
ಮಕ್ಕಿ ಕಾಮಕ್ಕಿ ಸಾಕು.
ಸೋಲೋದಕ್ಕೆ ಒಂದಲ್ಲ
ಎಂಟೆದೆ ಬೇಕು.
ಸೋಲು ಅರಗಿಸೋ ಮಕ್ಕಳಿಗೆ
ಗೆಲುವು ಯಾವತ್ತೂ
ಅಜೀರ್ಣವಾಗದು.

12
ಮಕ್ಕಳಿಗೆ ಕ್ರಿಕೆಟ್ ಅಂದ್ರೆ ಜೀವ
ಕೊಹ್ಲಿ ಅಂದ್ರೆ ಇನ್ನೂ ಜೀವ
ಕೊಹ್ಲಿ ಔಟ್ ಆದರೆ ಸಾಕು
ಅವರು ಟೀವಿ ಆಫ್ ಮಾಡ್ತಾರೆ.

